ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-4 Issue 1, July-August 2022, Pp. 67-72.
©*IIMRD*, Mysuru
www.iimrd.com

# ನಾಲ್ವಡಿ ಕೃಷ್ಣರಾಜ ಒಡೆಯರವರ ಗ್ರಾಮಾಂತರ ಪ್ರವಾಸಗಳು: ಒಂದು ಅವಲೋಕನ

**ಜಯಸ್ವಾಮಿ***

*ಸಂಶೋಧನಾ ವಿದ್ಯಾರ್ಥಿ, ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತಗಂಗೋತ್ರಿ, ಮೈಸೂರು.

**ಸಾರಾಂಶ: (Abstract)**

*ಮೈಸೂರು ಸಂಸ್ಥಾನದ ಆಡಳಿತದ ಅಧಿಕಾರ ಸೂತ್ರಗಳನ್ನು ವಹಿಸಿಕೊಂಡ ನಾಲ್ವಡಿ ಕೃಷ್ಣರಾಜ ಒಡೆಯರವರು ಕ್ರಿ.ಶ.1940ರವರೆಗೂ ಅತ್ಯಂತ ಆದರ್ಶಯುತವಾದ, ದಕ್ಷ ಮತ್ತು ಜನಾನುರಾಗಿ ಆಡಳಿತವನ್ನು ಮೈಸೂರು ಸಂಸ್ಥಾನದ ಪ್ರಜೆಗಳಿಗೆ ನೀಡಿದರು. ಮಾತೃಶ್ರೀ ರಾಜಪ್ರತಿನಿಧಿ ಮಹಾರಾಣಿ ಕೆಂಪನಂಜಮ್ಮಣ್ಣಿಯವರ ಮಾರ್ಗದರ್ಶನದಲ್ಲಿ ಪರಿಪಕ್ವಗೊಂಡ ನಾಲ್ವಡಿ ಕೃಷ್ಣರಾಜ ಒಡೆಯರು ಮೈಸೂರು ಸಂಸ್ಥಾನದಾದ್ಯಂತ ನಗರ ಪಟ್ಟಣಗಳಷ್ಟೇ ಅಲ್ಲದೆ, ಸಣ್ಣಪುಟ್ಟ ಗ್ರಾಮಗಳನ್ನು ಸಂದರ್ಶಿಸಿ, ಸಾಮಾನ್ಯ ಜನರ ಕಷ್ಟಸುಖಗಳನ್ನು ಪ್ರತ್ಯಕ್ಷವಾಗಿ ಅರಿತುಕೊಂಡು ಸಂಸ್ಥಾನದ ಎಲ್ಲ ರೀತಿಯ ಎಲ್ಲ ವರ್ಗದ ಜನರ ಅಭಿವೃದ್ಧಿಗೆ ಪೂರಕವಾಗುವಂತಹ ಹಲವಾರು ಯೋಜನೆಗಳನ್ನು, ಸುಧಾರಣೆಗಳನ್ನು ಜಾರಿಗೆ ತಂದರು. ಪ್ರಸ್ತುತ ಲೇಖನದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರವರು ಗ್ರಾಮೀಣ ಪ್ರದೇಶಗಳ ಅಭಿವೃದ್ಧಿ ಸಲುವಾಗಿ ಹಮ್ಮಿಕೊಂಡ ಪ್ರವಾಸಗಳ ಬಗ್ಗೆ ವಿವರಿಸಲಾಗಿದೆ.*

**ಮುಖ್ಯಪದಗಳು (Keywords):** ನಾಲ್ವಡಿ ಕೃಷ್ಣರಾಜ ಒಡೆಯರ, ಮೈಸೂರು ಸಂಸ್ಥಾನ, ಪ್ರವಾಸ, ಗ್ರಾಮೀಣ ಪ್ರದೇಶ.

## ಪೀಠಿಕೆ

ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ 15,591 ಪಟ್ಟಣಗಳೂ ಮತ್ತು 16,483 ಗ್ರಾಮಗಳು ಅಂದಿನ ಮೈಸೂರು ಸಂಸ್ಥಾನದಲ್ಲಿದ್ದವು. ಈ ಸಂಸ್ಥಾನಕ್ಕೆ ಸೇರಿದ ಈ ಎಲ್ಲಾ ಗ್ರಾಮಗಳನ್ನು ಮತ್ತು ಪಟ್ಟಣಗಳನ್ನು ಗಮನದಲ್ಲಿರಿಸಿಕೊಂಡು ಅವುಗಳಲ್ಲಿ ಅಗತ್ಯವಾದ ಸುಧಾರಣೆಗಳನ್ನು ತರುವುದು. ಆ ಮೂಲಕ ಸಂಸ್ಥಾನದ ಪ್ರಜೆಗಳ ಸಂರಕ್ಷಣೆ ಮಾಡುವುದು ಮಹಾರಾಜನ ಕರ್ತವ್ಯವೂ ಕೂಡ ಆಗಿದ್ದಿತು. ಮಹಾರಾಜರು ರಾಜ್ಯದ ಗ್ರಾಮಾಂತರ ಪ್ರದೇಶಗಳಲ್ಲಿ ಪ್ರವಾಸಗಳನ್ನು ಕೈಗೊಳ್ಳುವುದರಿಂದ ಗ್ರಾಮಗಳ ಜನರ ಸ್ಥಿತಿಗತಿಗಳನ್ನು ಅರ್ಥ ಮಾಡಿಕೊಳ್ಳುವುದರ ಜೊತೆಗೆ ರಾಜ ಮತ್ತು ಪ್ರಜೆಗಳ ನಡುವಿನ ಸಂಬಂಧಗಳನ್ನು ಹತ್ತಿರಗೊಳಿಸಿ, ಜನರಲ್ಲಿ ನ್ಯಾಯ, ನೀತಿ, ಧರ್ಮ ಮಾರ್ಗದಲ್ಲಿ ನಡೆಯಲು ಪ್ರಭಾವ ಬೀರುತ್ತಿದ್ದವು.

*Please cite this article as:* ಜಯಸ್ವಾಮಿ. (2022). ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಗ್ರಾಮಾಂತರ ಪ್ರವಾಸಗಳು: ಒಂದು ಅವಲೋಕನ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 4(1). ಪು.ಸಂ.* 67–72.

ನಾಲ್ವಡಿ ಕೃಷ್ಣರಾಜ ಒಡೆಯರು ಮೈಸೂರು ನಗರದ ಗ್ರಾಮಾಂತರ ಪ್ರದೇಶಗಳಲ್ಲಿ ಸಂಚರಿಸಿ ಸಾಮಾನ್ಯರಂತೆ ಉಡುಪು ಧರಿಸಿ ರೈತರು ಮುಂತಾದವರೊಡನೆ ಮಾತನಾಡಿ ಅವರ ಕಷ್ಟ ಸುಖಗಳನ್ನರಿತುಕೊಳ್ಳುತ್ತಿದ್ದರು. ಒಮ್ಮೆ ಒಂದು ಗ್ರಾಮದಲ್ಲಿ ಜೋಡೆತ್ತಿನ ಬಂಡಿಯ ಚಕ್ರಗಳು ಕೆಸರಿನಲ್ಲಿ ಹೂತುಕೊಂಡಿದ್ದುದನ್ನು ಗಮನಿಸಿದರು. ಬಂಡಿಯವನು ಎತ್ತುಗಳನ್ನು ಹೊಡೆದು ಅವುಗಳ ಬಾಲವನ್ನು ನುಲಿಯುತ್ತಿದ್ದುದನ್ನು ಕಂಡರು. ಕೂಡಲೇ ಕುದುರೆಯಿಂದಿಳಿದು ಬಂಡಿಯ ಚಕ್ರಗಳು ಹೂತುಗೊಂಡಿದ್ದ ಸ್ಥಳಕ್ಕೆ ಆಗಮಿಸಿ ಚಕ್ರಗಳನ್ನು ಮೇಲೆತ್ತಲು ಸಹಾಯ ಮಾಡಿದರು. ಬಂಡಿಯು ಮುಂದೆ ಸಾಗಿದ ಮೇಲೆ ಕೃಷ್ಣರಾಜ ಒಡೆಯರು, ಅವರಿಗೆ ಧನ್ಯವಾದ ಹೇಳಿ ಸಮಾಜದಲ್ಲಿ ಪ್ರತಿಯೊಬ್ಬರೂ, ಒಬ್ಬರಿಗೊಬ್ಬರು ಸಹಾಯ ಮಾಡುತ್ತ ಸಂತೃಪ್ತಿ ಜೀವನ ನಡೆಸಬೇಕೆಂದು ಅವರಿಗೆ ಹಿತವಚನ ಹೇಳಿ, ಕುದುರೆಯನ್ನೇರಿ ಮುಂದೆ ಸಾಗಿದರು.

ಈ ರೀತಿಯಲ್ಲಿ ಕೃಷಿಕರು ಮತ್ತು ಮೂಕ ಪ್ರಾಣಿಗಳ ಮೇಲೆ ಅನುಕಂಪ ಹೊಂದಿದ್ದ ನಾಲ್ವಡಿಯವರು ಅವುಗಳ ರಕ್ಷಣೆಗಾಗಿ ಅನೇಕ ಕ್ರಮಗಳನ್ನು ಮುಂದೆ ಕೈಗೊಳ್ಳಲು ಈ ಗ್ರಾಮಾಂತರ ಪ್ರವಾಸದ ಅನುಭವಗಳು ಪ್ರಭಾವ ಬೀರಿತು. ರಸ್ತೆಗಳನ್ನು ರಿಪೇರಿ ಮಾಡಿಸುವ ಮೂಲಕ ಪಟ್ಟಣಗಳಿಗೆ ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡಲು ಬರುತ್ತಿದ್ದ ಇಂತಹ ಸಾವಿರಾರು ಗಾಡಿಗಳು ಸುಲಲಿತವಾಗಿ ಪ್ರಯಾಣಿಸಲು ಅನುಕೂಲ ಮಾಡಿಕೊಡುವುದರ ಜೊತೆಗೆ ಮೂಕ ಪ್ರಾಣಿಗಳ ಸಂಕಟಗಳನ್ನು ಕಡಿಮೆ ಮಾಡಲು ಅವರು ತಮ್ಮ ಆಳ್ವಿಕೆಯ ಉದ್ದಕ್ಕೂ ಶ್ರಮಿಸಿದರು.[2]

ನಾಲ್ವಡಿಯವರಿಗೆ ಬಾಲ್ಯದಿಂದಲೂ ಪ್ರಾಣಿಗಳಲ್ಲಿ ಅತ್ಯಂತ ಪ್ರೀತಿ. ಹಸುಗಳಿಗೂ ಕರುಗಳಿಗೂ ಆರೈಕೆ ಮಾಡುವುದರಲ್ಲಿ ಅವರಿಗೆ ಬಾಲ್ಯದಿಂದಲೂ ತೀವ್ರಾಸಕ್ತಿ ಇದ್ದಿತು. ಅವರು ಗೋಕುಲಾಷ್ಟಮಿಯ ಹಬ್ಬದ ಉತ್ಸವದ ಸಂದರ್ಭದ ಮೆರವಣಿಗೆಯಲ್ಲಿ ಮಹಾರಾಜರ ಹಸು, ಯುವರಾಜರ ಹಸು, ಶ್ರೀಜಯಲಕ್ಷ್ಮಮ್ಮಣ್ಣಿಯವರ ಹಸು, ಶ್ರೀಕೃಷ್ಣಾಜಮ್ಮಣ್ಣಿಯವರ ಹಸು, ಶ್ರೀ ಚಲುವಾಜಮ್ಮಣ್ಣಿಯವರ ಹಸು– ಹೀಗೆ ಅರಮನೆಯಲ್ಲಿದ್ದ ತಮ್ಮೆಲ್ಲ ಬಂಧುಗಳೆಲ್ಲರ ಹೆಸರಿನಲ್ಲಿ ಹಸುಗಳನ್ನು ಸಾಲಾಗಿ ಮೆರಣಿಗೆಯಲ್ಲಿ ಕರೆದೊಯ್ಯಲಾಗುತ್ತಿತ್ತು. ಅರಮನೆಯಲ್ಲಿನ ವಸ್ತ್ರಾಭರಣಗಳಿಂದ ಅವುಗಳಿಗೆ ಅಂದವಾಗಿ ಆಲಂಕಾರ ಮಾಡಿಸುವುದರಲ್ಲಿ ಸಹೋದರ ಸೋದರಿಯರು ಪ್ರತಿಸ್ಪರ್ಧಿಗಳಾಗಿ ಸಡಗರ ಪಡುತ್ತಿದ್ದೂದನ್ನು ಕಂಡು ಅವರ ಮಾತೃಶ್ರೀ ಮಹಾರಾಣಿ ಕೆಂಪನಂಜಮ್ಮಣ್ಣಿಯವರು ಹರ್ಷಪಡುತ್ತಿದ್ದರು ಎಂಬುದಾಗಿ ಸಿ.ಕೆ.ವೆಂಕಟರಾಮಯ್ಯನವರು ತಮ್ಮ ಬರವಣಿಗೆಯಲ್ಲಿ ಉಲ್ಲೇಖಿಸಿದ್ದಾರೆ.[3]

ನಾಲ್ವಡಿ ಕೃಷ್ಣರಾಜ ಬಾಲಕರಾಗಿದ್ದಾಗಲೇ ಪಟ್ಟದ ಆನೆ, ಪಟ್ಟದ ಹಸು ಮತ್ತು ಪಟ್ಟದ ಕುದುರೆಗಳಿಗೆ – ತಾವೇ ಎದುರಿಗೆ ನಿಂತು ಅಂದವಾಗಿ ಬಣ್ಣ ಹಾಕಿಸುತ್ತಿದ್ದರು. ಅವರು ತಮ್ಮ ಹಸುಗಳು ಮತ್ತು ಕುದುರೆಗಳಿಗೆ ಹೆಸರುಗಳನ್ನು ಕೊಟ್ಟಿದ್ದು, ಅವುಗಳ ಹೆಸರುಗಳನ್ನು ಯಾವ ಕ್ರಮದಲ್ಲಿ ಕೂಗಿದರೆ, ಆ ಅನುಕ್ರಮದಲ್ಲಿ ಅವು ಓಡಿಬರುತ್ತಿದ್ದವು. ಆ ರೀತಿಯ ಪ್ರೀತಿಯನ್ನು ಅವರು ತಾವು ಸಾಕುತ್ತಿದ್ದ ಪ್ರಾಣಿಗಳಿಗೆ ಕೊಟ್ಟು ಅವುಗಳಿಂದ ಅದೇ ರೀತಿಯ ಪ್ರೀತಿಯನ್ನು ಸಂಪಾದಿಸಿಕೊಂಡಿದ್ದರು. ಹಸುಗಳಿಗೂ, ಕುದುರೆಗಳಿಗೂ, ಆನೆಗಳಿಗೂ ಸ್ವಹಸ್ತದಿಂದ ಮೇವನ್ನು ತಿನ್ನಿಸುತ್ತಿದ್ದರು. ಅವುಗಳಲ್ಲಿ ಯಾವುದಾದರೂ ಕ್ರೌರ್ಯವನ್ನು ತೋರಿಸಿದರೆ, ಅವುಗಳನ್ನು ಆದರದಿಂದ ಪೋಷಿಸಿ ಸಮಾಧಾನಪಡಿಸುತ್ತಿದ್ದರು. ಕುದುರೆ ಸವಾರಿ ಮಾಡುವಾಗ ಒಂದೇ

ಕುದುರೆಯು ದಣಿಯುವವರೆಗೂ ಸವಾರಿ ಮಾಡದೆ, ಬೇರೆ ಬೇರೆ ಕುದುರೆಗಳನ್ನೇರಿ ಸವಾರಿ ಮಾಡುತ್ತಿದ್ದುದು, ಕೃಷ್ಣರಾಜ ಒಡೆಯರ ಪ್ರಾಣಿ ದಯೆಗೊಂದು ಶ್ರೇಷ್ಠ ನಿದರ್ಶನವಾಗಿದೆ. ನಾಲ್ವಡಿ ಕೃಷ್ಣರಾಜ ಒಡೆಯರು ಮೈಸೂರಿನಲ್ಲಿ ಗೋಶಾಲೆಯೊಂದನ್ನು ಸ್ಥಾಪಿಸಿದ್ದರು. ಇದಕ್ಕೆ 'ಕರೋಹಟ್ಟಿ' ಎಂದು ಕರೆಯಲಾಗುತ್ತಿತ್ತು. ಪ್ರಸಿದ್ಧ ಚಿತ್ರಲೇಖಕರಾಗಿದ್ದ ರಾಜಾರವಿವರ್ಮರವರು ಒಂದು ದಿನ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರೊಡನೆ ಗೋಶಾಲೆಗೆ ಭೇಟಿ ನೀಡಿ ಪರಿಶೀಲಿಸಿದ ನಂತರ "ಭರತ ಖಂಡದಲ್ಲಿ ಅನೇಕ ರಾಜರ ಆಸ್ಥಾನಗಳನ್ನು ನೋಡಿ ಬಂದಿದ್ದೇನೆ. ಆದರೆ ಮೈಸೂರು ಸಂಸ್ಥಾನದಲ್ಲಿರುವ ಗೋಶಾಲೆಯಲ್ಲಿರುವಂತೆ ಗೋಸೇವೆಯ ಏರ್ಪಾಡು ಮತ್ತೆಲ್ಲಿಯೂ ಇಲ್ಲ. ಮೈಸೂರು ಸಂಸ್ಥಾನದ ಕೀರ್ತಿಯು ಬೆಳಗಲು ಮೈಸೂರು ಅರಮನೆಯ ಗೋಸೇವೆಯೊಂದೇ ಸಾಕು" ಎಂದು ಹೇಳಿ ಅಲ್ಲಿಯ ಅಚ್ಚುಕಟ್ಟನ್ನೂ ನೈರ್ಮಲ್ಯವನ್ನೂ ಪೋಷಣೆಯ ಬಗೆಯನ್ನೂ ಮತ್ತು ಮಹಾರಾಜರಿಗೆ ಮೂಕ ಪ್ರಾಣಿಗಳ ಮೇಲಿದ್ದ ಪ್ರೀತಿಯ ಬಗೆಗೆ ಶ್ಲಾಘಿಸಿರುವರು.

ತಿರುವಾಂಕೂರಿನ ರಾಜಮನೆತನದವರಾದ ಈ ರಾಜಾರವಿವರ್ಮರು ನಾಲ್ವಡಿ ಕೃಷ್ಣರಾಜ ಒಡೆಯರು ಆಹ್ವಾನದ ಮೇರೆಗೆ ಮೈಸೂರಿಗೆ ಬಂದು ನಾಲ್ವಡಿಯವರ ಕೋರಿಕೆಯಂತೆ ಅರಮನೆಗಾಗಿ ಅನೇಕ ವರ್ಣಚಿತ್ರಗಳನ್ನು ರಚಿಸಿಕೊಟ್ಟರು. ಆಗ ರವಿವರ್ಮರು ಮೈಸೂರು ಅರಮನೆಯಲ್ಲಿಯೇ ವಾಸವಿದ್ದು, ನಾಲ್ವಡಿಯವರ ಪ್ರಜಾಪ್ರೇಮ ಮತ್ತು ಮೂಕ ಪ್ರಾಣಿಗಳ ಮೇಲಿದ್ದ ಅನುಕಂಪ, ಪ್ರೀತಿಯನ್ನು ಹತ್ತಿರದಿಂದ ಗಮನಿಸಿದ್ದರು. ರವಿವರ್ಮ ಮೈಸೂರು ರಾಜಮನೆತನದವರ ಅನೇಕ ವ್ಯಕ್ತಿಗಳ ಚಿತ್ರಗಳನ್ನು ಸೊಗಸಾಗಿ ರಚಿಸಿದ್ದರೂ ಸಹ ಪುರಾಣ ಮತ್ತು ಮಹಾಕಾವ್ಯಗಳಿಂದ ಆಯ್ದ ಕೆಲವು ದೇವದೇವತೆಯರ ಹಾಗೂ ನಾಯಕ–ನಾಯಕಿಯರ ತೈಲವರ್ಣ ಚಿತ್ರಗಳು, ಪ್ರಾಣಿ–ಪಕ್ಷಿ ಮತ್ತು ಪ್ರಕೃತಿಯ ಚಿತ್ರಗಳು, ರವಿವರ್ಮರು ಕಲೆಯನ್ನು ಜೀವಂತವಾಗಿರಿಸಿವೆ. ರವಿವರ್ಮರು ರಚಿಸಿರುವ ಸುಮಾರು ಹದಿನಾರು ಶ್ರೇಷ್ಠ ಕೃತಿಗಳು ಇಂದಿಗೂ ಅರಮನೆಯಲ್ಲಿವೆ. ನಾಲ್ವಡಿ ಕೃಷ್ಣರಾಜ ಒಡೆಯರ ಕಲಾಭಿಮಾನದ ಸಂಕೇತವಾಗಿ ಅವು ರಾರಾಜಿಸುತ್ತಿವೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ, ಮಗುವಿಗೆ ಮೊಲೆ ಹಾಲುಣಿಸುತ್ತಿರುವ ತಾಯಿಯ ಮುಖದಲ್ಲಿನ ತನ್ಮಯತೆ, ಕೀಚಕನ ಮನೆಗೆ ಹೊರಟಿರುವ ದ್ರೌಪದಿಯ ಮುಖದಲ್ಲಿರುವ ದುಗುಡ, ಬೆಳದಿಂಗಳ ಇರುಳಲ್ಲಿ ಇನಿಯನ ನಿರೀಕ್ಷೆಯಲ್ಲಿರುವ ಜವ್ವನೆ, ಜಟಾಯುವಿನ ವಧೆಯ ಸಮಯದಲ್ಲಿ ರಾವಣನ ಮುಖದಲ್ಲಿ ತುಳುಕುವ ಕ್ರೌರ್ಯ, ಶಕುಂತಲ ಮತ್ತು ದಮಯಂತಿಯರ ಅನ್ಯಮನಸ್ಕತೆ, ಭಾರತದ ವಿವಿಧ ಭಾಗಗಳ ಸಾಂಪ್ರದಾಯಿಕ ಉಡುಪು ಧರಿಸಿರುವ ಮಹಿಳೆಯರ ಸಂಗೀತ ಮೇಳ – ಹೀಗೆ ಅನೇಕ ಮನಮೋಹ ವರ್ಣರಂಜಿತ ಚಿತ್ರಗಳನ್ನು ನಾಲ್ವಡಿಯರ ಅಭಿರುಚಿಯಂತೆ ರಚಿಸಿಕೊಟ್ಟಿದ್ದಾರೆ.[5]

ನಾಲ್ವಡಿ ಕೃಷ್ಣರಾಜ ಒಡೆಯರು ಕೈಗೊಂಡ ಪ್ರವಾಸಗಳು ಅನೇಕ ಉದ್ದೇಶಗಳನ್ನಿರಿಸಿಕೊಂಡು ಮಾಡಿದಂತಹವುಗಳಾಗಿವೆ. ಅವುಗಳಲ್ಲಿ ಕೆಲವು ಧಾರ್ಮಿಕ ಪ್ರವಾಸಗಳಾದರೆ; ಕೆಲವು ವಿಹಾರಾರ್ಥವಾಗಿಯೂ, ಕೆಲವು ರಾಜ್ಯದ ಸಮಸ್ಯೆಗಳ ಅಧ್ಯಯನಕ್ಕಾಗಿಯೂ, ಮತ್ತೆ ಕೆಲವು ಅಭಿವೃದ್ಧಿ ಪ್ರವಾಸಗಳಾದರೆ; ಕೆಲವು ಪ್ರಜೆಗಳ ಆಹ್ವಾನದ ಮೇರೆಗೆ ಕೈಗೊಂಡ ಪ್ರವಾಸಗಳಾಗಿವೆ. ಒಟ್ಟಾರೆ ಈ ಎಲ್ಲಾ ಪ್ರವಾಸಗಳು ತಮ್ಮ ಸಂಸ್ಥಾನದ ಅಭಿವೃದ್ಧಿ ಮತ್ತು ಪ್ರಜೆಗಳಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಕೈಗೊಂಡಿರುವ ಪ್ರವಾಸಗಳಾಗಿವೆ.

ಮೇಲುಕೋಟೆ ಚೆಲುವ ನಾರಾಯಣ ಮೈಸೂರು ಒಡೆಯರ ಆರಾಧ್ಯ ದೇವರಾದುದರಿಂದ ಮೈಸೂರು ಒಡೆಯರೆಲ್ಲರೂ ಆಗಾಗ್ಗೆ ಈ ಪವಿತ್ರ ಧಾರ್ಮಿಕ ಸ್ಥಳವನ್ನು ಸಂದರ್ಶಿಸಿ ತಮ್ಮ ಭಕ್ತಿ ನಮನಗಳನ್ನು ಸಲ್ಲಿಸುವುದು ವಾಡಿಕೆಯಲ್ಲಿದ್ದಂತೆ ನಾಲ್ವಡಿ ಕೃಷ್ಣರಾಜ ಒಡೆಯರು ಇದಕ್ಕೆ ಹೊರತಾಗಿರಲಿಲ್ಲ. ಕ್ರಿ.ಶ.1900ರಲ್ಲಿ, ನವೆಂಬರ್ 12ನೇ ದಿನಾಂಕದ ಅರಮನೆ ದಾಖಲೆಯೊಂದು ನಾಲ್ವಡಿಯವರು ಮೇಲುಕೋಟೆಗೆ ಧಾರ್ಮಿಕ ಪ್ರವಾಸ ಕೈಗೊಂಡುದರ ಬಗೆಗೆ ದಾಖಲಿಸಿದೆ. ಅದರ ಪ್ರಕಾರ ನಾಲ್ವಡಿ ಕೃಷ್ಣರಾಜ ಒಡೆಯರು ತಮ್ಮ ವಿದ್ಯಾಗುರುಗಳು ಎಸ್.ಎಂ.ಫ್ರೇಸರ್ ರವರೊಂದಿಗೆ ಮೇಲುಕೋಟೆಗೆ ಪ್ರವಾಸ ಕೈಗೊಂಡು, ತಮ್ಮ ಮನೆತನದ ಆರಾಧ್ಯದೈವ ಶ್ರೀ ಮೇಲುಕೋಟೆ ಚೆಲುವ ನಾರಾಯಣಸ್ವಾಮಿ ದೇವರ ದರ್ಶನ ಮಾಡಿ ತಮ್ಮ ಸೇವೆಯನ್ನು ಸಲ್ಲಿಸಿದರು. ಅಲ್ಲಿಂದ ಪಕ್ಕದಲ್ಲೇ ನಿರ್ಮಿಸಲಾಗಿದ್ದ ಸಂಸ್ಕೃತ ಪಾಠಶಾಲೆಯ ಗ್ರಂಥಾಲಯಕ್ಕೆ ಭೇಟಿ ನೀಡಿ ಅಲ್ಲಿರುವ ಧಾರ್ಮಿಕ ಗ್ರಂಥಗಳ ಪರಿಶೀಲನೆ ಮಾಡಿದರು. ನಂತರ ಚಾಮರಾಜೇಂದ್ರ ಹೂವಿನ ವಸಂತೊಧ್ಯಾನಕ್ಕೆ ತೆರಳಿ ಅಲ್ಲಿನ ಸೌಂದರ್ಯವನ್ನು ವೀಕ್ಷಿಸಿ ಕೆಲಸಮಯ ಅಲ್ಲಿ ವಿಶ್ರಮಿಸಿದರು. ಅನಂತರ ಅಲ್ಲಿಯೇ ಪ್ರತಿಷ್ಠಾಪಿಸಲಾಗಿದ್ದ ಚಲುವನಾರಾಯಣಸ್ವಾಮಿ ದೇವಾಲಯಕ್ಕೆ ಆಗಮಿಸಿ ಅಲ್ಲಿನ ಕಲಾವೈಭವವನ್ನು ವೀಕ್ಷಿಸಿ, ದೇವರಿಗೆ **'ಪೀತಾಂಬರ'** ಕೊಡುಗೆಯನ್ನು ನೀಡಿದುದರ ಬಗೆಗೆ ಈ ದಾಖಲೆಯಲ್ಲಿ ಉಲ್ಲೇಖಿತಗೊಂಡಿದೆ.[6]

ಮೇಲ್ಕಂಡ ದಾಖಲೆಯ ಪ್ರಕಾರ ಮಹಾರಾಜರು ಅದೇ ಸಂದರ್ಭದಲ್ಲಿ ಪಕ್ಕದಲ್ಲೇ ನಿರ್ಮಿಸಲಾಗಿದ್ದ ಪವಿತ್ರ ಕಲ್ಯಾಣಿಗೆ ಭೇಟಿ ನೀಡಿದುದರ ಬಗೆಗೆ, ನಂತರ ಶ್ರೀ ಉಗ್ರನರಸಿಂಹಸ್ವಾಮಿ ದೇವಾಲಯಕ್ಕೆ ಭೇಟಿ ನೀಡಿದುದರ ಬಗೆಗೆ ಕೆಳಗಿನಂತೆ ವಿವರ ನೀಡುತ್ತದೆ. "His Highness will then go up the hill which is near the Holy Kalyani and visit the Sri Narasimhaswami temple on the summit. There are about 500 steps to reach the summit. According to the traditional custom, there will be breaking of coconuts on each step as His Highness ascends them. The top of the hill commonds a view of the entire place and its neighbourhood and the same will be most interesting and enjoyable. When returning, there will be illumination at the Kalyani and after witnessing it, His Highness may proceed to the Travellers Bunglow"[7] ಎಂದು ದಾಖಲಿಸಿದೆ.

ಕ್ರಿ.ಶ.1915ರ ದಾಖಲೆಯೊಂದು ಮೇಲುಕೋಟೆಗೆ ಮಹಾಸ್ವಾಮಿಯವರು ಮತ್ತೊಮ್ಮೆ ಆಗಮಿಸಿದುದರ ಬಗೆಗೆ ಉಲ್ಲೇಖಿಸುತ್ತದೆ. ಇದರ ಪ್ರಕಾರ ಕ್ರಿ.ಶ.1915, ಜುಲೈ 17, ಶನಿವಾರ ಮಧ್ಯಾಹ್ನ ಸಮಯ 4.00 ಘಂಟೆಗೆ ಮೈಸೂರು ಬಿಟ್ಟು, ಮೇಲುಕೋಟೆಗೆ ಸಂಜೆ 6.00 ಘಂಟೆಗೆ ತಲುಪಿ ಅಂದು ರಾತ್ರಿ ಅಲ್ಲಿಯೇ ಉಳಿದಿದ್ದು ಮಠದ ಸತ್ಕಾರ ಸ್ವೀಕರಿಸಿದರು. ಮಾರನೇ ದಿನ, ಭಾನುವಾರ ಬೆಳಿಗ್ಗೆ ಅಲ್ಲಿನ ನರಸಿಂಹಸ್ವಾಮಿ ದೇವಾಲಯ, ಪರಕಾಲಮಠ ಹಾಗೂ ಯತೀಂದ್ರಸ್ವಾಮಿಗಳ ಮಠಕ್ಕೆ ಭೇಟಿ ನೀಡಿ ತಮ್ಮ ಸೇವೆಯನ್ನು ಸಲ್ಲಿಸಿದುದಲ್ಲದೆ, ಅಲ್ಲಿನ ಕಾರ್ಯ ಚಟುವಟಿಕೆಗಳ ಬಗೆಗೆ ಪರಿಶೀಲಿಸಿದರು. ನಂತರ ಅದೇ ದಿನ ಮಧ್ಯಾಹ್ನ ಸಂಸ್ಕೃತ ಪಾಠಶಾಲೆಯನ್ನು ಸಂದರ್ಶಿಸಿದುದಲ್ಲದೆ, ಆ ದೇವರ ಉತ್ಸವ ಸಮಾರಂಭದಲ್ಲಿ ಭಾಗವಹಿಸಿ,

ಪ್ರಜೆಗಳಿಗೂ, ಮಠದ ಸ್ವಾಮಿಜಿಗಳಿಗೂ ತಮ್ಮ ವೈಯಕ್ತಿಕ ಭೇಟಿಯ ಮೂಲಕ ಹರ್ಷವನ್ನು ತಂದುಕೊಟ್ಟರು.[8]

ಮೇಲುಕೋಟೆಯಲ್ಲಿರುವ ಶ್ರೀಪರಕಾಲ ಮಠಕ್ಕೂ ಹಾಗೂ ಶ್ರೀ ಯತೀಂದ್ರ ಮಠಕ್ಕೂ ಮಠವನ್ನು ತಮ್ಮ ಹಿಡಿತಕ್ಕೆ ತೆಗೆದುಕೊಳ್ಳುವ ವಿಷಯದಲ್ಲಿ ಘರ್ಷಣೆ ಉಂಟಾಗಿತ್ತು. ಈ ವಿಷಯ ಕುರಿತು ಪರಕಾಲ ಮಠದ ಶ್ರೀಗಳವರು ಮಹಾರಾಜರಿಗೆ ತಕರಾರು ದೂರು ಸಲ್ಲಿಸಿದ್ದರು. ಅದರ ಪ್ರಯುಕ್ತ ಆ ಎರಡೂ ಮಠಗಳ ಗುರುವಾರ್ಯರನ್ನು ಭೇಟಿ ಮಾಡಿ ಈ ಸಮಸ್ಯೆಯನ್ನು ಬಗೆಹರಿಸಲು ನಾಲ್ವಡಿ ಕೃಷ್ಣರಾಜರು ಕ್ರಿ.ಶ.1915ರಲ್ಲಿ ಮತ್ತೊಮ್ಮೆ ಮೇಲುಕೋಟೆಗೆ ಪ್ರಯಾಣ ಬೆಳೆಸಿದ್ದೂದರ ಬಗೆಗೆ ಮತ್ತೊಂದು ದಾಖಲೆಯು ಶೃತಪಡಿಸುತ್ತದೆ.[9]

ಹೀಗೆ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರು ಮೈಸೂರು ಸಂಸ್ಥಾನ ಮೂಲೆ ಮೂಲೆಗೂ ಒಂದಲ್ಲ ಒಂದು ಉದ್ದೇಶವನ್ನಿರಿಸಿಕೊಂಡು ಪ್ರವಾಸಗಳನ್ನು ಕೈಗೊಳ್ಳುವ ಮೂಲಕ ಜನರನ್ನು ಸಂಪರ್ಕಿಸಿ, ಅವರ ಸ್ಥಿತಿಗತಿಗಳ ಬಗೆಗೆ ವಿಚಾರಿಸಿ ಅವರಿಗೆ ಪರಿಹಾರ ದೊರಕಿಸಲು ಪ್ರಮಾಣಿಕವಾಗಿ ಪ್ರಯತ್ನಿಸುತ್ತಿದ್ದರು. ಕೆಲವು ಸಂದರ್ಭಗಳಲ್ಲಿ ಸ್ಥಳೀಯರು ಅವಾಸ್ತವಿಕವಾದ ಮತ್ತು ದುರ್ಬಲವಾದ ಯೋಜನೆಗಳು ಅಥವಾ ಕಾಮಗಾರಿಗಳನ್ನು ತಮ್ಮ ಮುಂದಿಟ್ಟಾಗ ಅವು ಸಾಧ್ಯವಾಗದೆಂದು ತಿಳಿಸಲು ಹಿಂಜರಿಯುತ್ತಿರಲಿಲ್ಲ. ಒಮ್ಮೆ ಮಳವಳ್ಳಿಯ ನೀರಾವರಿ ಕಾಲುವೆಯನ್ನು ನಿರ್ಮಿಸಲು ಅಲ್ಲಿಯ ನಾಗರೀಕರು ಕೋರಿಕೊಂಡಾಗ ಪ್ರಾಕೃತಿಕವಾಗಿ ಅಲ್ಲಿ ಕಾಲುವೆ ನಿರ್ಮಾಣ ಮಾಡುವುದು ಕಷ್ಟಕರವೆಂದು ಮನವರಿಕೆ ಮಾಡಿಕೊಂಡು, ಅವು ಸಾಧ್ಯವಾಗದೆಂದು ಅವರಿಗೆ ಮನವರಿಕೆ ಮಾಡಿಕೊಟ್ಟರು. ಮಳವಳ್ಳಿಯ ನೀರಾವರಿ ಕಾಲುವೆಯ ನಾಗರಿಕ ಬೇಡಿಕೆ ಸದ್ಯಕ್ಕೆ ಸಾಧ್ಯವಾಗಬೇಕೆಂದು ಖಡಾಖಂಡಿತವಾಗಿ ತಿಳಿಸಿದ್ದರು.[10]

ಕ್ರಿ.ಶ.1907ರಲ್ಲಿ ಕೋಲಾರ ಜಿಲ್ಲೆಯ ಮುಳಬಾಗಿಲು, ಚಿಂತಾಮಣಿ, ಶ್ರೀನಿವಾಸಪುರ ಮೊದಲಾದ ಕಡೆ ಸಂಚರಿಸಿದಾಗ ಅಲ್ಲಿನ ಕೆರೆಗಳನ್ನು ದುರಸ್ತಿ ಮಾಡಿಸಿಕೊಡಬೇಕೆಂದು ಸ್ಥಳೀಯರು ಮನವಿ ಸಲ್ಲಿಸಿದರು. ಆಗ ಮಹಾರಾಜರು ಕೆರೆಗಳ ರಚನೆ, ಅದರ ಒಳಹರಿವು ಮತ್ತು ಹೊರಹರಿವು, ಅದರಿಂದ ಆಗುವ ಖರ್ಚುವೆಚ್ಚಗಳು ಮತ್ತು ರೈತರಿಗೆ ಉಂಟಾಗುವ ಲಾಭದ ಪ್ರಮಾಣಗಳನ್ನು ಕುರಿತು ಸೂಕ್ಷ್ಮ ವಿವರಗಳನ್ನು ಚರ್ಚಿಸಿದ ನಂತರ, ಆ ಕೆರೆಯಿಂದ ನೀರು ಬರುವ ಸಾಧ್ಯಸಾಧ್ಯತೆಯನ್ನು ವಿಶ್ಲೇಷಿಸಿ ಅವರಿಗೆ ಸೂಕ್ತ ಸಲಹೆಯನ್ನು ನೀಡುತ್ತಿದ್ದರು.[11] ಇದೇ ರೀತಿಯಲ್ಲಿ ಬೆಂಗಳೂರಿನ ಬೌರಿಂಗ್ ಪೇಟೆಯಲ್ಲಿ ಗಣಿ ಉದ್ಯಮದ ಬೆಳವಣಿಗೆ ಹಾಗೂ ಅಲ್ಲಿಗೆ ರೈಲು ರಸ್ತೆಯನ್ನು ನಿರ್ಮಾಣ ಮಾಡುವ ಬಗ್ಗೆ ಚಿತ್ರದುರ್ಗಕ್ಕೆ ಭೇಟಿ ನೀಡಿದಾಗ ಅಲ್ಲಿನ ವ್ಯಾಪಾರದ ಬಗ್ಗೆ ಪ್ರತಿಯೊಂದು ಭಾಗದ ವಿಶೇಷ ಸ್ಥಿತಿ ಮತ್ತು ಸಮಸ್ಯೆಗಳನ್ನು ಪ್ರಸ್ತಾಪಿಸಿ ಅದಕ್ಕೆ ಪರಿಹಾರ ನೀಡಲು ಪ್ರಯತ್ನಿಸಿದರು. ಕ್ರಿ.ಶ.1914 ಜನವರಿ 5ರಂದು ಬಾಬಾಬುಡನಗಿರಿ ಪ್ರವಾಸವನ್ನು ಕೈಗೊಂಡು ಅಲ್ಲಿಯ ಬೆಳವಣಿಗೆಗಳನ್ನು ಪರಿಶೀಲಿಸಿದರು. ಬೆಂಗಳೂರಿನಿಂದ ಹೊರಟು, ತರೀಕೆರೆ, ಶಾಂತವೇರಿ, ಕಲ್ಹಟ್ಟಿ ಮೂಲಕ ಮಾರಿಕಣಿವೆ ಮತ್ತು ದತ್ತಾತ್ರೆಯ ಪೀಠಕ್ಕೂ ಭೇಟಿ ನೀಡಿ ಅಲ್ಲಿಯ ಪರಿಸ್ಥಿತಿಗಳನ್ನು ಪರಾಮರ್ಶಿಸಿದರು.[12]

**ಉಪಸಂಹಾರ**

ಈ ರೀತಿಯಲ್ಲಿ ಮೈಸೂರು ಸಂಸ್ಥಾನಾದಾದ್ಯಂತ, ಅನೇಕ ಗ್ರಾಮಗಳಿಗೆ ಪ್ರವಾಸ ಕೈಗೊಂಡು, ಅಲ್ಲಿಯ ಜನರ ಸಮಸ್ಯೆಗಳನ್ನು ಮನನ ಮಾಡಿಕೊಂಡು, ಅವುಗಳ ನಿವಾರಣೆಗೆ ಕ್ರಮಕೈಗೊಂಡು, ಜನರ ಪ್ರೀತಿಗೆ

ನಾಲ್ವಡಿಯವರು ಪಾತ್ರರಾಗಿದ್ದರು. ಅವರ ಈ ಪರಿಶ್ರಮದ ಫಲವೇ ನಾಲ್ವಡಿಯವರಿಗೆ ಮಾದರೀ ರಾಜ್ಯದ ನಿರ್ಮಾಪಕ ಮತ್ತು **'ರಾಜರ್ಷಿ'** ಎಂಬ ಖ್ಯಾತಿಯನ್ನು ತಂದುಕೊಟ್ಟವು.

**ಕೊನೆ ಟಿಪ್ಪಣಿಗಳು**


1. Village Uplift in Mysore or QJMS, Reviews, P.473.
2. ವೆಂಕಟರಾಮಯ್ಯ. ಸಿ.ಕೆ. ಆಳಿದ ಮಹಾಸ್ವಾಮಿಯವರು. ಪು.189–190.
3. ಅದೇ.,
4. ಅದೇ.,ಪು.216
5. ನಂಜರಾಜ ಅರಸು ಪಿ.ವಿ. (ವರ್ಷ). ಮೈಸೂರು : ನೂರಿನ್ನೂರು ವರ್ಷಗಳ ಹಿಂದೆ. ಪ್ರಕಾಶಕರ ಹೆಸರು. ಪು.100.
6. His Highness the Maharaja's visit to Melkote on 12th, 1900A.D. The letter has been enclosed in the Appendix
7. Sl.No.90; File No: 11 of 1915, visit of H.H to Melkote (Palace Records)
8. ಅದೇ.,
9. No.4577-90-Muz.File No.3 of 1902; Dated Bangalore, 20th April 1908; Sl.No.90, File No; 11 of 1915; Sl.No.82, File No.3 of 1915, Melkote Trip of His Highness
10. ಇತಿಹಾಸ ದರ್ಶನ; ಸಂಪುಟ. 27, 2012, ಬೆಂಗಳೂರು, ಪು.440
11. ಕೃಷ್ಣರಾಜ ಒಡೆಯರ ಭಾಷಣಗಳು, 1920–23, ಪು.83–85.
12. Provisional trip of His Highness the Maharaja of Mysore to Bababudan Hills and Marikanive, Sl.No.72. File No: 3 of 1914.